ಆ) ಹಾಗಿದ್ದಲ್ಲಿ ಈವರೆಗೂ ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು? ಹಾಗೂ ಈ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಡಾ: ಹೆಚ್.ಸಿ.ಮಹದೇವಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಹೌದು --

ಆ) ನಿಯಮಗಳ ಮೇರೆಗೆ ಕಟ್ಟಡದ ಅಂದಾಜಿನ ಶೇ.30ರಷ್ಟು ಅನುದಾನವನ್ನು ಲಭ್ಯಪಡಿಸಿಕೊಂಡು ಜಿಲ್ಲಾ ಪಂಚಾಯತ್ ಪ್ರಸ್ತಾವನೆ ಸಲ್ಲಿಸದೆ ಇರುವುದರಿಂದ ಮಂಜೂರಾತಿ ನೀಡಿರುವುದಿಲ್ಲ. ಧಾರವಾಡ ಜಿಲ್ಲಾ ಪಂಚಾಯಿತಿಯವರು 95-96ನೇ ಸಾಲಿನಲ್ಲಿ ಒಟ್ಟು ಅಂದಾಜಿನ ಶೇ.30ರಷ್ಟು ಅನುದಾನ ಒದಗಿಸಿಕೊಂಡು ಪ್ರಸ್ತಾವನೆಯನ್ನು ರೂಪಿಸಿಕೊಂಡರೆ ಕಾಮಗಾರಿ ಕೈಗೆತ್ತಿಕೊಳ್ಳಲು ಮಂಜೂರಾತಿ ನೀಡಲು ಪರಿಶೀಲಿಸಲಾಗುವುದು.

ವಿಷಯ:- ಗಜೇಂದ್ರಗಡ ಆಸ್ಪತ್ರೆಗೆ ಸಿಬ್ಬಂದಿಗಳ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 255(634)

ಶ್ರೀ ಶೈಲಪ್ಪ ಬಿದರೂರ್(ರೋಣ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೋಣ ತಾಲ್ಲೂಕು, ಗಜೇಂದ್ರಗಡ ನಗರದಲ್ಲಿ 30 ಹಾಸುಗೆಯುಳ್ಳ ಸುಸಜ್ಜಿತವಾದ ಆಸ್ಪತ್ರೆಯನ್ನು ಕಟ್ಟಿಸಿ, ಮೂರು ವರ್ಷಗಳಾದರೂ ಅಲ್ಲಿ ವೈದ್ಯರು ಮತ್ತು ಇತರೆ ಸಿಬ್ಬಂದಿಯನ್ನು ನೇಮಿಸದೆ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು, ಮತ್ತು ಸರ್ಕಾರವು ವೈದ್ಯರು ಹಾಗೂ ಸಿಬ್ಬಂದಿ ವರ್ಗದವರನ್ನು ತ್ವರಿತವಾಗಿ ನೇಮಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಹೌದು --

ಆ) ವೈದ್ಯರ ಕೊರತೆ ಇರುವುದಿಲ್ಲ. ಇತರೆ ಖಾಲಿ ಇರುವ ಹುದ್ದೆಗಳನ್ನು 1995-96ರ ಸಾಲಿನ ಸಾಮಾನ್ಯ ವರ್ಗಾವಣೆ ಸಮಯದಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ರಾಜ್ಯದಲ್ಲಿ ವಿವಿಧ ಮಾಧ್ಯಮವುಳ್ಳ ಶಾಲೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲ ಪ್ರಶ್ನೆ ಸಂಖ್ಯೆ : 256(100)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಉರ್ದು, ಮರಾಠಿ, ತೆಲಗು, ತಮಿಳು, ಇಂಗ್ಲಿಷ್, ಗುಜರಾತಿ ಹಾಗೂ ಕನ್ನಡ ಮಾಧ್ಯಮ ನರ್ಸರಿ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಸರಕಾರಿ ಹಾಗೂ ಖಾಸಗಿ ಶಾಲೆಗಳೆಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

	ನರ್ಸರಿ		ಪ್ರಾಥಮಿಕ		ಪ್ರೌಢಶಾಲೆ	
	ಖಾಸಗಿ	ಸರ್ಕಾರಿ	ಖಾಸಗಿ	ಸರ್ಕಾರಿ	ಖಾಸಗಿ	ಸರ್ಕಾರಿ
1) ಉರ್ದು	834	40	185	2404	104	23
2) ಮರಾಠಿ	171	30	31	699	76	—
3) ತೆಲಗು	06	04	22	74	02	03
4) ತಮಿಳು	26	04	112	140	04	—
5) ಇಂಗ್ಲಿಷ್	469	—	220	02	2459	—
6) ಗುಜರಾತಿ	—	—	02	01	—	—
7) ಕನ್ನಡ	2113	1115	5320	27126	3516	10510
8) ಮಲಯಾಳಂ	—	—	05	03	—	—

ವಿಷಯ:- ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 258(623)